SN – 046

# ಮೂರನೇ ಸೆಮಿಸ್ಟರ್ ಬಿ.ಎಸ್ಸಿ. ಪರೀಕ್ಷೆ, ನವೆಂಬರ್/ಡಿಸೆಂಬರ್ 2017
## (ರಿಪೀಟರ್ಸ್) (2012-13 ಮತ್ತು ನಂತರದವರಿಗೆ)
## ಕನ್ನಡ ಭಾಷಾ ಪತ್ರಿಕೆ – III
## ಸಾಹಿತ್ಯ ಸಲ್ಲಾಪ – ೨

ಸಮಯ : 3 ಗಂಟೆಗಳು ಅಂಕಗಳು : 100

I. ಅ) ಈ ಪದ್ಯದ ಭಾವಾರ್ಥ ಬರೆಯಿರಿ : (1×6=6)

ಊರ ನರಕವ ತಿಂದು ಬೋರ್‍ಯಾಡ್ಡಿಂಡುವ ಎಮ್ಮಿ
ಹಾಲಿನ ಸವಿ ನೋಡಣ್ಣ,
ಅದರ ಸ್ವಾದಷ್ಟಿ ನೀ ಉಂಡು ಗುಂಡಾಗಿ ಕುಂತೀದಿ
ಶೀಲ ಎಲ್ಲಿ ಉಳಿತ್ಲೇಳಣ್ಣ.

ಆ) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ : (2×3=6)

ಕಡಕೋಳ ಮಡಿವಾಳಪ್ಪ, ನಾಟಕ, ಎಸ್. ಜಿ. ಸಿದ್ಧರಾಮಯ್ಯ, ಜನನಾಯಕ.

II. ಅ) ಐದು ಪದಗಳಿಗೆ ಅರ್ಥ ಬರೆಯಿರಿ : (1×5=5)

ಕಳವೆ, ಮುನ್ನೀರ್, ಉಪದ್ರವ, ಪೊಳಲು, ಪೊಸ, ನೀರವ, ಕಾವಣ.

ಆ) ಐದು ಪದಗಳಿಗೆ ಮೂಲರೂಪ ಬರೆಯಿರಿ : (1×5=5)

ಬುಕ್ಕು, ಕಾರ್ಡು, ಒಂದೀಟು, ಪೆಸರ್, ಸಿರಿ, ಪಕ್ಕಿ, ಮೃತ್ಯು.

ಇ) ಐದು ಪದಗಳನ್ನು ಬಿಡಿಸಿ ಬರೆಯಿರಿ : (1×5=5)

ಕಿವಿಗಿನಿದಪ್ಪಂ, ನಾಲಗೆಯುಳ್ಳ, ಕಲಿಗಾಲ, ಇಲಿಯನ್ನು, ಭಿನ್ನವಾಗಿ, ಪ್ರವೇಶವಿಲ್ಲ, ಮಾತೆಂತು.

ಈ) ಐದು ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ : (1×5=5)

ಗದ್ದುಗೆ, ಸುಖೀರಾಜ್ಯ, ತಲೆದೂಗು, ಗಣನಾಯಕ, ಗುರಿಕಾರ, ಛಂಗನೆ, ಮರೆಮಾಡು.

III. ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : (4×5=20)

1) ಕನ್ನಡ ನಾಡಿನ ಚೆಲುವನ್ನು ಕವಿ ಹೇಗೆ ವರ್ಣಿಸಿದ್ದಾರೆ ?
2) 'ರಾಜಕೀಯ ಗಾಥೆ' ಕವಿತೆಯಲ್ಲಿ ಚಿತ್ರಿಸಿರುವ ರಾಜಕೀಯ ಎಂತಹುದು ?
3) ಕೆಳವರ್ಗದವರ ಬದುಕಿನಲ್ಲಿ ಬರಹ ಒದಗಿಸುವ ಅವಕಾಶಗಳು.
4) ಸಾವು ಹೆಣೆಯುವ ಬಲೆಯನ್ನು ಕುರಿತು ಬರೆಯಿರಿ.
5) ಕತೆ ಕೇಳುವ ಮಕ್ಕಳ ಕುತೂಹಲವನ್ನು ವಿವರಿಸಿ.
6) ಆದಮ್ ಸಾಹೇಬರ ಕುಟುಂಬದ ಪರಿಚಯ.

ಪು.ತಿ.ನೋ.

BMSCW

SN – 046

IV. ನಾಲ್ಕು ಪ್ರಶ್ನೆಗಳಿಗೆ ವಿವರವಾದ ಉತ್ತರ ಬರೆಯಿರಿ : (4×12=48)

1) ಕನ್ನಡ ನಾಡಿನ ಚೆಲುವನ್ನು ಆಂಡಯ್ಯ ಚಿತ್ರಿಸಿರುವ ರೀತಿಯನ್ನು ವಿವರಿಸಿ.

**ಅಥವಾ**

‘ಶೀಲ’ ಮಾಡುವವರು ‘ನಗೆಗೇಡಿ’ಗಳೆಂದು ಹೇಳಲು ಕಾರಣವೇನು ?

2) ಕನ್ನಡ ನುಡಿಯಲ್ಲಿ ಸಂಸ್ಕೃತ ವಹಿಸಿರುವ ಯಜಮಾನಿಕೆ ಯಾವ ಬಗೆಯದು ಚರ್ಚಿಸಿ.

**ಅಥವಾ**

‘ಪೇಟೆಂಟ್ ಕಲ್ಚರ್’ ನಿಂದಾಗಿ ಗ್ರಾಮ ಸಮುದಾಯದಲ್ಲಿ ಉಂಟಾಗಿರುವ ಪರಾಧೀನತೆ ಎಂತಹುದು ?

3) ಬದುಕಿನ ಒಲವನ್ನು ಕತ್ತರಿಸುವ ಸಾವಿನ ಅಧಿಕಾರ ಎಂತಹುದು ? ವಿವರಿಸಿ.

**ಅಥವಾ**

‘ಗೆಲ್ಲಲಾರ್ಕುಮೆ ಮೃತ್ಯುರಾಜನಂ’ – ನಾಟಕದ ಆಶಯವನ್ನು ಬರೆಯಿರಿ.

BMSCW

4) ಮಂಜಣ್ಣ ಯಾರು ? ಆತನು ಕತೆಗಾರನಾಗಿದ್ದು ಹೇಗೆ ?

**ಅಥವಾ**

‘ನಿಜದ ಬದುಕಿಗೂ ಸಿನಿಮಾದ ಬದುಕಿಗೂ ಇರುವ ವ್ಯತ್ಯಾಸವನ್ನು ‘ಗಿರಿಜಾ ಕಂಡ ಸಿನಿಮಾ’ ಹೇಗೆ ಚಿತ್ರಿಸುತ್ತದೆ ? ವಿವರಿಸಿ.

---